## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ.820/2015

ಸಾಕ್ಷಿಗೆ ದಿನಾಂಕ 02-04-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 22 P.W.: 12

| | | |
|---|---|---|
| ಹೆಸರು | : | ಮಲ್ಲೇಶ ದೊಡ್ಡಮನಿ |
| ತಂದೆಯ ಹೆಸರು | : | ಫಕೀರನಾಯ್ಕ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಡಿ ವೈ ಎಸ್ ಪಿ |
| ವಾಸ ಸ್ಥಳ | : | ಕೂಡ್ಲಿಗಿ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 13-10-2013 ರಿಂದ 27-03-2014 ರವರೆಗೆ ಹಾಗೂ 26-05-2014 ರಿಂದ 07-05-2015 ರವರೆಗೆ ಹೆಚ್ ಬಿ ಹಳ್ಳಿಯಲ್ಲಿ ಸಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 22-12-2014 ರಂದು ಈ ಪ್ರಕರಣದ ಕಡತವನ್ನು ಚಾಸಾ-21 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ.

ದಿಃ 30-12-2014 ರಂದು ಚಾಸಾ-17 ರಿಂದ 19 ಮತ್ತು 21 ರವರೊಂದಿಗೆ ಆರೋಪಿತರ ಪತ್ತೆಯಲ್ಲಿದ್ದಾಗ ನಂದೀಪುರ ಕ್ರಾಸ್ ಬಳಿ 1, 3, 4 ರವರನ್ನು ಅನುಮಾನದ ಮೇರೆಗೆ ವಶಕ್ಕೆ ಪಡೆದು ವಿಚಾರಣೆ ಮಾಡಲಾಗಿ 4 ಆರೋಪಿತರು ಕಳ್ಳತನ ಮಾಡಿದ ಬಗ್ಗೆ 1, 3, 4 ನೇ ಆರೋಪಿತರು ಒಪ್ಪಿಕೊಂಡ ಮೆರೇಗೆ ಚಾಸಾ-4, 5 ಪಂಚರನ್ನು ಬರಮಾಡಿಕೊಂಡು ಚಾಸಾ-11, 13 ರವರ ಸಹಾಯದಿಂದ ಅದೇ ಸ್ಥಳದಲ್ಲಿ ಆರೋಪಿತರ ಅಂಗಶೋದನೆ ಮಾಡಲಾಗಿ 4 ನೇ ಆರೋಪಿತನಿಂದ 13 ಗ್ರಾಂ ತೂಕದ ಒಂದು ಬಂಗಾರದ ಚೈನ್, 3 ನೇ ಆರೋಪಿತನಿಂದ 5 ಗ್ರಾಂ ಬೊರಮಾಳ ಸರ, 1 ನೇ ಆರೋಪಿಯಿಂದ 4.5 ಗ್ರಾಂ ತೂಕದ ಬಂಗಾರದ ಜುಮುಕಿ ಜಪ್ತುಪಂಚನಾಮೆ ಮೂಲಕ ಅಮಾನತ್ತುಪಡಿಸಿಕೊಂಡಿರುತ್ತೇನೆ. ಪಂಚನಾಮೆಯನ್ನು ಅದೇ ದಿನ ಬೆಳಿಗ್ಗೆ 8 ರಿಂದ 9 ಗಂಟೆಯವರೆಗೆ ಸ್ಥಳದಲ್ಲಿ ಜರುಗಿಸಿರುತ್ತೇನೆ. ಸಾಕ್ಷಿಯು ನಿಪಿ-18 ಪಂಚನಾಮೆಯನ್ನು ನೋಡಿ ಗುರುತಿಸಿರುತ್ತಾರೆ ಮತ್ತು ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-18 ಸಿ ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಒಂದು ಕಚ್ಚಾ ನಕಾಶೆಯನ್ನು ಸಹಾ ತಯಾರಿಸಿರುತ್ತೇನೆ. ನಂತರ 1, 3, 4 ನೇ ಆರೋಪಿತರನ್ನು ತಂಬ್ರಹಳ್ಳಿ ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಅವರ ವಿವರವಾದ ಸ್ವಖುಷಿ ಹೇಳಿಕೆಯನ್ನು

ಪಡೆಯಲಾಯಿತು. ಸದರಿ ಆರೋಪಿತರು ಹೇಳಿದಂತೆ ಕಳ್ಳತನ ಮಾಡಿದ ಸೀರೆಗಳನ್ನು ಬಚ್ಚಿಟ್ಟ ಸ್ಥಳ ತೋರಿಸುವುದಾಗಿ ಹೇಳಿರುವುದರಿಂದ ಸದರಿ ಆರೋಪಿತರನ್ನು ಚಾಸಾ-13, 17 ರಿಂದ 19 ಮತ್ತು 21 ರವರನ್ನು ಕರೆದುಕೊಂಡು ತಂಬ್ರಹಳ್ಳಿ ಪೋಲೀಸ್ ಠಾಣಾ ವ್ಯಾಪ್ತಿಯ ಏಣಗಿ ಬಸಾಪುರ ಹಳ್ಳದ ಹತ್ತಿರ ವಾಹನವನ್ನು ನಿಲ್ಲಿಸಲಾಗಿ ಭತ್ತದ ಬಣವೆಯಿಂದ ಸುಮಾರು 20 ಸೀರೆಗಳನ್ನು ಹಾಗೂ ಕೃತ್ಯಕ್ಕೆ ಉಪಯೋಗಿಸಿದ ಒಂದು ಕಬ್ಬಿಣದ ರಾಡನ್ನು ಹಾಜರುಪಡಿಸಿದ್ದು ಅದನ್ನು ಜಪ್ತು ಪಂಚನಾಮೆ ಮೂಲಕ ಅಮಾನತ್ತುಪಡಿಸಿಕೊಳ್ಳಲಾಯಿತು. ಪಂಚನಾಮೆಯನ್ನು ಮದ್ಯಾಹ್ನ 12 ರಿಂದ 1 ಗಂಟೆಯವರೆಗೆ ಜರುಗಿಸಲಾಯಿತು. ಸಾಕ್ಷಿಯು ನಿಪಿ-17 ಪಂಚನಾಮೆಯನ್ನು ನೋಡಿ ಗುರುತಿಸಿರುತ್ತಾರೆ ಮತ್ತು ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-17 ಸಿ ಎಂದು ಗುರುತಿಸಲಾಯಿತು. ಜಪ್ತಾದ ಸ್ವತ್ತುಗಳ ಬಗ್ಗೆ ಪಿ ಎಫ್ ನಂ.47 ಮತ್ತು 48 ರನ್ವಯ ಮಾನ್ಯ ನ್ಯಾಯಾಲಯಕ್ಕೆ ಸ್ವತ್ತಿನ ಪಟ್ಟಿಗಳನ್ನು ಸಲ್ಲಿಸಲಾಯಿತು. ಸದರಿ ದಾಖಲೆಗಳನ್ನು ನೋಡಿದರೆ ಗುರುತಿಸಲಾಯಿತು. ಸಾಕ್ಷಿಯು ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-23 ಮತ್ತು 24 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-23 ಎ ಮತ್ತು 24 ಎ ಎಂದು ಗುರುತಿಸಲಾಯಿತು. ನಂತರ ಸದರಿ ಆರೋಪಿತರು ಕಳುವು ಮಾಡಿದ ಮನೆಯನ್ನು ತೋರಿಸಿದ್ದು ಇರುತ್ತದೆ. ನಂತರ ಆರೋಪಿತ ನಂ.1, 3 ಮತ್ತು 4 ರವರ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಅದೇ ದಿನ ಚಾಸಾ-1 ಮತ್ತು 6 ರಿಂದ 10 ರವರ ಮರು ಹೇಳಿಕೆಯನ್ನು ಪಡೆದಿದ್ದೇನೆ. ಅದೇ ದಿನ ಚಾಸಾ-13, 17 ರಿಂದ 19, 21 ರವರ ಹೇಳಿಕೆ ಪಡೆದಿದ್ದೇನೆ. ದಿಃ22-01-2015 ರಂದು ಮಾನ್ಯ ನ್ಯಾಯಾಲಯದ ಆದೇಶದಂತೆ ಜಪ್ತುಪಡಿಸಿಕೊಂಡ ವಸ್ತುಗಳನ್ನು ಚಾಸಾ-7 ರವರಿಗೆ ನೀಡಿರುತ್ತೇನೆ. ಅದೇ ದಿನ ಚಾಸಾ-2 ಮತ್ತು 4 ರವರ ಸಮಕ್ಷಮ ಪಂಚನಾಮೆಯನ್ನು ಬೆಳಿಗ್ಗೆ 10 ರಿಂದ 10.45 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಪೋಟೋವನ್ನು ತೆಗೆದಿರುತ್ತೇನೆ. ಸಾಕ್ಷಿಯು ನಿಪಿ-12 ಪಂಚನಾಮೆಯನ್ನು ನೋಡಿ ಗುರುತಿಸಿರುತ್ತಾರೆ. ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-12 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-13 ಮತ್ತು 14 ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-13 ಬಂಗಾರದ ಆಭರಣಗಳ ಕುರಿತು ತೆಗೆದ ಪೋಟೋ ಆಗಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ-14 ಸೀರೆಗಳ ಕುರಿತು ತೆಗೆದ ಪೋಟೋ ಆಗಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ. ಆ ದಿನ 1, 3, 4 ನೇ ಆರೋಪಿತರಿಂದ ವಶಪಡಿಸಿಕೊಂಡ ಕೃತ್ಯಕ್ಕೆ ಬಳಸಿದ ಕಬ್ಬಿಣದ ರಾಡನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು ಮಾ-1 ಎಂದು ಗುರುತಿಸಲಾಯಿತು.

ದಿಃ07-05-2015 ರಂದು ನನಗೆ ವರ್ಗಾವಣೆಯಾದ ಪ್ರಯುಕ್ತ ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-23 ರವರಿಗೆ ವಹಿಸಿರುತ್ತೇನೆ. ಆರೋಪಿತ ನಂ.1, 3, 4 ರವರನ್ನು ನೋಡಿದರೆ ಗುರುತಿಸುತ್ತೇನೆ. 4 ನೇ ಆರೋಪಿ ಮೃತಪಟ್ಟಿರುತ್ತಾನೆ. 1 ಮತ್ತು 3 ನೇ ಆರೋಪಿತರು ನ್ಯಾಯಾಲಯದಲ್ಲಿ ಗೈರುಹಾಜರಾಗಿದ್ದು ಸದರಿ ಆರೋಪಿತರನ್ನು ಗುರುತಿಸಲು ಆರೋಪಿತರ ಪರ ವಕೀಲರ ತಕರಾರು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಪಾಟೀ ಸವಾಲು. 1ನೇ ಆರೋಪಿ ಪರ ಶ್ರೀ ಪಿ ಆರ್ ವಕೀಲರಿಂದಃ-

ಆ ದಿನ ನಂದೀಪುರ ಗ್ರಾಮದ ಕ್ರಾಸ್ ಹತ್ತಿರ 1, 3, 4 ನೇ ಆರೋಪಿತರು ಯಾವ ವಾಹನದಲ್ಲಿದ್ದರು ಎಂದರೆ ಸಾಕ್ಷಿಯು ಅವರು ವಾಹನದಲ್ಲಿರಲಿಲ್ಲ ರಸ್ತೆಯ ಎಡಭಾಗದಲ್ಲಿ ನಿಂತಿದ್ದರು. ನಾನು ಸ್ಥಳಕ್ಕೆ ಹೋದಾಗ ನನ್ನ ಜೊತೆ ಚಾಸಾ-17, 18 ಮತ್ತು 21 ರವರು ಇದ್ದರು. ಹೆಚ್ ಬಿ ಹಳ್ಳಿಯಿಂದ ಹಂಪಸಾಗರಕ್ಕೆ ಹೋಗುವ ರಸ್ತೆಯ ಎಡಭಾಗಕ್ಕೆ 1, 3 ಮತ್ತು 4 ನೇ ಆರೋಪಿತರು ನಿಂತಿದ್ದರು. ಆ ದಿನ ಪಂಚರಾದ ಚಾಸಾ-4 ಮತ್ತು 5 ರವರನ್ನು ಚಾಸಾ-13 ರವರಿಂದ ಬರಮಾಡಿಕೊಂಡಿರುತ್ತೇನೆ ಅವರಿಗೆ ನೋಟೀಸನ್ನು ಕೊಟ್ಟಿಲ್ಲ. ನಿಪಿ-18 ಪಂಚನಾಮೆಯನ್ನು ಚಾಸಾ-16 ರವರು ಬರೆದಿರುತ್ತಾರೆ. ಸದರಿ ಪಂಚನಾಮೆಯನ್ನು ಪಂಚರು ಮತ್ತು ನನ್ನ ಹೇಳಿಕೆಯಂತೆ ತಯಾರಿಸಿದ್ದು ಇರುತ್ತದೆ. ಸದರಿ ಪಂಚನಾಮೆಯಲ್ಲಿ ಬಂಗಾರದ ತೂಕ ಮತ್ತು ಬೆಲೆಯ ಬಗ್ಗೆ ಉಲ್ಲೇಖವಿದೆ ಎಂದರೆ ಸರಿ. ಚಾಸಾ-11 ರವರು ಬಂಗಾರವನ್ನು ತೂಕ ಮಾಡಿದ್ದು ಅವರ ಹೇಳಿಕೆಯಂತೆ ಸದರಿ ತೂಕ ಮತ್ತು ಬೆಲೆಯನ್ನು ಪಂಚನಾಮೆಯಲ್ಲಿ ಬರೆದಿರುತ್ತೇನೆ. ಸ್ಥಳದಲ್ಲಿ ಚಾಸಾ-11 ರವರು ತೂಕದ ಯಂತ್ರ ತಂದಿದ್ದು ಅದರ ಮೂಲಕ ತೂಕ ಮಾಡಲಾಯಿತು. ನಾನು ಸದರಿ ಪಂಚನಾಮೆಯನ್ನು ಮೇಲೆ ಹೇಳಿದ ಸ್ಥಳದಲ್ಲಿ ಮಾಡಿಲ್ಲವೆಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ನಾನು ಸ್ಥಳದಲ್ಲಿ ಹೇಳಿ ಬರೆಸಿಲ್ಲ ಠಾಣೆಯಲ್ಲಿ ಕುಳಿತು ತಯಾರಿಸಿರುತ್ತೇನೆಂದರೆ ಸರಿಯಲ್ಲ. ನಿಮ್ಮ ಪ್ರಕಾರ ಪಂಚನಾಮೆ ಕಾಲಕ್ಕೆ ಒಟ್ಟು ಎಷ್ಟು ಜನ ಹಾಜರಿದ್ದರು ಎಂದರೆ ಸಾಕ್ಷಿಯು ಈಗಾಗಲೇ ನನ್ನ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನುಡಿದಿದ್ದೇನೆ ಎನ್ನುತ್ತಾರೆ. ಸದರಿ ಪಂಚಾನಾಮೆಗೆ ಚಾಸಾ-11 ರವರು ಮತ್ತು ನಿಮ್ಮ ಇತರೆ ಸಿಬ್ಬಂದಿಯ ಸಹಿಗಳನ್ನು ಪಡೆದಿದ್ದೀರಾ ಎಂದರೆ ನನಗೆ ನೆನಪಿಲ್ಲ. ನಾನು ಸ್ಥಳದಲ್ಲಿ ಸದರಿ ಪಂಚನಾಮೆ ಮಾಡಿಲ್ಲ ಆದ್ದರಿಂದ ಅವರ ಸಹಿಗಳನ್ನು ಪಡೆದಿಲ್ಲವೆಂದರೆ ಸರಿಯಲ್ಲ. ನಂದೀಪುರ ಕ್ರಾಸ್ ಬಳಿ ನಿಪಿ-18 ಮಾಡುವ ಸಮಯದಲ್ಲಿ ಫೋಟೋ ಏನಾದರೂ ತೆಗೆದಿದ್ದೀರಾ ಎಂದರೆ ಸಾಕ್ಷಿಯು ನಾನು ಅಲ್ಲಿ ಫೋಟೋ ತೆಗೆದಿದ್ದು ನೆನಪಿದೆ ಆದರೆ ಕಡತದಲ್ಲಿ ಲಭ್ಯವಿಲ್ಲವೆನ್ನುತ್ತಾರೆ. ನಿಪಿ-17 ಪಂಚನಾಮೆಯನ್ನು ಏಣಗಿ ಬಸಾಪುರ ಗ್ರಾಮದ ಹಳ್ಳದ ಹತ್ತಿರ ಇರುವ ಜಯಣ್ಣನವರ ಕಣದಲ್ಲಿಯ

ಒಂದು ಬಣವೆ ಬಳಿ ಮಾಡಿರುತ್ತೇನೆ ಸದರಿ ಪಂಚನಾಮೆಯನ್ನು ಚಾಸಾ-16 ರವರು ಬರೆದಿರುತ್ತಾರೆ ಅದಕ್ಕೆ ನಾನು ಮತ್ತು ಪಂಚರು ಹೇಳಿರುತ್ತೇವೆ. ಆ ಸಮಯದಲ್ಲಿ ಫೋಟೋಗಳನ್ನು ತೆಗೆದಿದ್ದು ಇತ್ತು ಆದರೆ ಅದು ಕಡತದಲ್ಲಿ ಲಭ್ಯವಿಲ್ಲ. ಸದರಿ ಎರಡೂ ಪಂಚನಾಮೆಯಲ್ಲಿ ನಿಪಿ-18 ನ್ನು ಮೊದಲು ಮಾಡಿದ್ದು ನಂತರ ನಿಪಿ-17 ನ್ನು ಮಾಡಿದ್ದು ಇರುತ್ತದೆ. ಸದರಿ ಕಣ ಜಯಣ್ಣ ಇವರಿಗೆ ಸೇರಿದ ಬಗ್ಗೆ ಯಾವುದೇ ದಾಖಲೆ ಪಡೆದಿಲ್ಲ ಮತ್ತು ಅವರ ಹೇಳಿಕೆಯನ್ನು ಸಹಾ ನಾನು ಪಡೆದಿಲ್ಲ. ಆ ದಿನ ನಾನು ನಿಪಿ-17 ಪಂಚನಾಮೆಯನ್ನು ಸ್ಥಳದಲ್ಲಿ ಮಾಡಿಲ್ಲ, ಸ್ಥಳದಲ್ಲಿ ಪಂಚರ ಸಹಿ ಪಡೆದಿಲ್ಲ, ಯಾವುದೇ ಸೀರೆಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ, ಠಾಣೆಯಲ್ಲಿ ಕುಳಿತು ಸದರಿ ಪಂಚನಾಮೆ ತಯಾರಿಸಿರುತ್ತೇನೆಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡಿರುವಂತಹ ರೇಷ್ಮೆ ಸೀರೆಗಳು ಮತ್ತು ಮು ಮಾಲು-1 ರಂತಹ ವಸ್ತು ಬೇರೆ ಕಡೆ ಸಿಗುತ್ತದೆಂದರೆ ಸಿಗಬಹುದು. ನಾನು ಆರೋಪಿತರು ಕಳುವು ಮಾಡಿರುತ್ತೇವಂತಾ ತೋರಿಸಿದ ಮನೆಯಲ್ಲಿ ನನ್ನ ಶನಿಖಾವಧಿಯಲ್ಲಿ ಯಾವುದೇ ಬೀಗಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ನಾನು ನಿಪಿ-23 ಮತ್ತು 24 ರಂತೆ ಎರಡು ಪಿ ಎಫ್ ಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆರೋತಪಿರಿಂದ ನಾನು ಬಂಗಾರವನ್ನು ಅಮಾನತ್ತುಪಡಿಸಿಕೊಂಡಿರುತ್ತೇನಂತಾ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆ ಮತ್ತು ಮರುಹೇಳಿಕೆಗಳನ್ನು ನಾನು ಪಡೆದಿಲ್ಲವೆಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿತರಿಗೂ ಮತ್ತು ಮು ಮಾಲುಗಳಿಗೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ. ಪಿರ್ಯಾದಿದಾರರು ಒಂದು ತಪ್ಪು ಮಾಹಿತಿಯಿಂದ ನೀಡಿದ ದೂರನ್ನು ನೀಡಿದ್ದು ಅದಕ್ಕೆ ಅನುಕೂಲವಾಗುವ ರೀತಿಯಲ್ಲಿ ತಪ್ಪು ಮಾಹಿತಿಯಿಂದ ಕೂಡಿದ ಭಾಗಶಃ ತನಿಖೆ ಮಾಡಿ, ದಾಖಲೆಗಳನ್ನು ತಯಾರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

2 ಮತ್ತು 3 ನೇ ಆರೋಪಿ ಪರ ವಕೀಲರು 1ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅನುಮೋದಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ